ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/32955/2022-23

ದಿನಾಂಕ : 27 SEP 2022

## ಸುತ್ತೋಲೆ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಕೇಬಲ್ ಅಳವಡಿಸಿದ ನಂತರ ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ.

ಉಲ್ಲೇಖ:-
1. ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶ ಸಂಖ್ಯೆ ಬಿಬಿಎಂಪಿ/ಆ.ಕಾ/ಪಿಆರ್/08/2022-23 ದಿನಾಂಕ 18/04/2022
2. ಕವಿಪ್ರನಿನಿ/ವ್ಯನಿ/ಬಿ9/32955/2022-23/60 ದಿನಾಂಕ 20/06/2022 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಇಂಧನ ಇಲಾಖೆ ರವರಿಗೆ ಬರೆದ ಅರೆ ಸರ್ಕಾರಿ ಪತ್ರ.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಪತ್ರ ಸಂಖ್ಯೆ ಎನರ್ಜಿ319ವಿಎಸ್‌ಸಿ2022 ದಿನಾಂಕ 29/07/2022.

* * * * * * * * *

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಉಲ್ಲೇಖ (1) ರ ಕಚೇರಿ ಆದೇಶದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಅನುಸಾಧನ ಅಳವಡಿಸಲು/ದುರಸ್ತಿ ಪಡಿಸಲು ಸರ್ಕಾರದ ವಿವಿಧ ಇಲಾಖೆ/ನಿಗಮ/ಮಂಡಳಿಗಳು MARCCS (Multi Agency Road Cutting Co-ordination System) online ತಂತ್ರಾಂಶದ ಅರ್ಜಿ/ಕೋರಿಕೆಗಳಂತೆ ರಸ್ತೆ ಕತ್ತರಿಸಲು ಅನುಮತಿ ಪರವಾನಿಗೆ ಶುಲ್ಕವನ್ನು ಮಾತ್ರ ಪಾವತಿಸಿಕೊಳ್ಳಲಾಗುವುದು ಹಾಗೂ ರಸ್ತೆ ಕತ್ತರಿಸುವ ಕೋರಿಕೆ ಸಂಸ್ಥೆಗಳು ನುರಿತ ಯೋಜನಾ ಸಮಾಲೋಚಕರು (ಸಿವಿಲ್) ಅನ್ನು ನಿಯೋಜಿಸಿಕೊಳ್ಳುವುದು ಕಡ್ಡಾಯವಾಗಿದ್ದು, ರಸ್ತೆ ಪುನಃಶ್ಚೇತನಗೊಳಿಸುವ ತಾಂತ್ರಿಕ ವಿಶಿಷ್ಟ ವಿಶ್ಲೇಷಣೆ ಹಾಗೂ ನಕ್ಷೆಯೊಂದಿಗೆ ರಸ್ತೆ ಕತ್ತರಿಸಲು ಮತ್ತು ಪುನಃಶ್ಚೇತನಗೊಳಿಸುವ ಪ್ರಮಾಣ ಪತ್ರವನ್ನು ನೀಡಿ ಶೇ.10 ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಿ ಪಾಲಿಕೆಯ ಮುಖ್ಯ ಅಭಿಯಂತರರೊಂದಿಗೆ ರಸ್ತೆ ಕತ್ತರಿಸುವ ಸಂಸ್ಥೆಯ ಯೋಜನಾ ಸಮಾಲೋಚಕರು (ಸಿವಿಲ್) ಜಂಟಿಯಾಗಿ ದೃಢೀಕರಿಸುವ ಕ್ರಮವನ್ನು ಜಾರಿಗೊಳಿಸಿದೆಯೆಂದು ತಿಳಿಸಲಾಗಿದೆ.

ಕವಿಪ್ರನಿನಿ ಯಿಂದ ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಯ ವೆಚ್ಚವನ್ನು ಬಿಬಿಎಂಪಿಗೆ ಸಂದಾಯ ಮಾಡಿ, ಭೂಗತ ಕೇಬಲ್ ಅಳವಡಿಕೆ ನಂತರ ಪುನಃಶ್ಚೇತನ ಕಾಮಗಾರಿಯನ್ನು ಬಿಬಿಎಂಪಿ ವತಿಯಿಂದಲೇ ನಿರ್ವಹಿಸುವ ಪ್ರಸ್ತುತ ಚಾಲ್ತಿಯಲ್ಲಿರುವ ಪದ್ಧತಿಯನ್ನು ಮುಂದುವರೆಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೂಕ್ತ ನಿರ್ದೇಶನ ನೀಡುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರನ್ನು ಉಲ್ಲೇಖ (2) ರ ಪತ್ರದಲ್ಲಿ ಕೋರಲಾಗಿತ್ತು.

ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರು ಉಲ್ಲೇಖ (3) ರ ಪತ್ರದಲ್ಲಿ ದಿನಾಂಕ 08/07/2022 ರಂದು ನಡೆದ ಪರಿಶೀಲನಾ ಸಭೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ರಸ್ತೆ ಅಗೆಯುವ ಸಂಸ್ಥೆಯೇ ಪುನಃಶ್ಚೇತನ ಕಾಮಗಾರಿಯನ್ನು ಪ್ರಮಾಣಿತ ಮಟ್ಟದಲ್ಲಿ (Standard Condition) ಮತ್ತು ನಿಗದಿತ ಸಮಯದಲ್ಲಿ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆಂದು ಸೂಚಿಸಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಯ ಉಲ್ಲೇಖ (1) ರ ಕಚೇರಿ ಆದೇಶದನ್ವಯ ಕ್ರಮವಹಿಸಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ನಿಗಮದ ಭೂಗತ ಕೇಬಲ್ ಅಳವಡಿಸಿದ ನಂತರ ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

1. ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಗಳ ಸಂಬಂಧ, ಇನ್ನು ಮುಂದೆ ತಯಾರಿಸುವ ವಿಸ್ತೃತ ಯೋಜನಾ ವರದಿ (ಡಿಪಿಆರ್) ಗಳಲ್ಲಿ, ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಯನ್ನು ಪ್ರಮಾಣಿತ ಮಟ್ಟದಲ್ಲಿ (Standard Condition) ನಿರ್ವಹಿಸಲು ಅಗತ್ಯವಿರುವ ಅಂಶಗಳನ್ನು ಅಳವಡಿಸಿಕೊಳ್ಳುವುದು.

2. ಈಗಾಗಲೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ಅನುಮೋದನೆಗೊಂಡಿರುವ ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಕೈಗೊಂಡಿರದಿದ್ದಲ್ಲಿ/ಟೆಂಡರ್‌ಗಳು ಸ್ವೀಕೃತವಾಗಿಲ್ಲದಿದ್ದಲ್ಲಿ ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಗಳಿಗೆ ಅವಶ್ಯವಿರುವ ಅಂಶಗಳನ್ನು ಸದರಿ ಟೆಂಡರ್‌ಗಳಲ್ಲಿ ಅಳವಡಿಸಿಕೊಳ್ಳುವುದು.

3. ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕಾಮಗಾರಿಗಳಿಗೆ ಈಗಾಗಲೇ ಕಾರ್ಯಾದೇಶ ನೀಡಿದ್ದಲ್ಲಿ/ ಕಾರ್ಯ ಪ್ರಗತಿಯಲ್ಲಿದ್ದಲ್ಲಿ/ಬಿಬಿಎಂಪಿ ರಸ್ತೆ ಅಗೆತದ ಪುನಃಶ್ಚೇತನದ ವೆಚ್ಚವನ್ನು ಬಿಬಿಎಂಪಿಗೆ ಪಾವತಿಸದ್ದಿದ್ದಲ್ಲಿ, ಅಂತಹ ಕಾಮಗಾರಿಗಳನ್ನು ನಿರ್ವಸುತ್ತಿರುವ ಏಜೆನ್ಸಿಗಳ ಮುಖಾಂತರ ರಸ್ತೆ ಅಗೆತದ ಪುನಃಶ್ಚೇತನದ ಕಾಮಗಾರಿಯನ್ನು ಸದರಿ ಕಾಮಗಾರಿಗಳ ಟೆಂಡರ್ ನಿಯಮ ಜಿ.ಸಿ.ಸಿ ಸೆಕ್ಷನ್ 3.0 ರ ಕಂಡಿಕೆ 24.2 ರನ್ವಯ ಹೆಚ್ಚುವರಿ ಕಾಮಗಾರಿ ಅಂಶಗಳಂತೆ ನಿರ್ವಹಿಸುವುದು.

4. ಬಿಬಿಎಂಪಿ ಆದೇಶದಂತೆ ರಸ್ತೆ ಅಗೆತದ ಪರವಾನಿಗೆ ಪಡೆಯಲು ಅಗತ್ಯ ಪರವಾನಿಗೆ ಶುಲ್ಕ/ಮೇಲ್ವಿಚಾರಣಾ ಶುಲ್ಕಗಳನ್ನು ಬಿಬಿಎಂಪಿಗೆ ಪಾವತಿಸಲು ಕ್ರಮಕೈಗೊಳ್ಳುವುದು.

5. ಭೂಗತ ಕೇಬಲ್ ಅಳವಡಿಸುವ ಸಂಬಂಧ ರಸ್ತೆ ಅಗೆತದ ಪುನಃಶ್ಚೇತನ ಕಾಮಗಾರಿಗೆ ನುರಿತ ಯೋಜನಾ ಸಮಾಲೋಚಕರು (ಸಿವಿಲ್) ರನ್ನು ಗುತ್ತಿಗೆದಾರರು ನಿಯೋಜಿಸಿಕೊಳ್ಳುವ ಸಂಬಂಧ ಅಗತ್ಯ ಷರತ್ತುಗಳನ್ನು ಮುಂಬರುವ ಟೆಂಡರ್‌ಗಳಲ್ಲಿ ಅಳವಡಿಸಿಕೊಳ್ಳುವುದು ಹಾಗೂ ಹಾಲಿ ಚಾಲ್ತಿಯಲ್ಲಿರುವ ಭೂಗತ ಕೇಬಲ್ ಕಾಮಗಾರಿಗಳಿಗೆ ನುರಿತ ಯೋಜನಾ ಸಮಾಲೋಚಕರು (ಸಿವಿಲ್) ರವರನ್ನು ನಿಯೋಜಿಸಿಕೊಳ್ಳುವ ಬಗ್ಗೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು ರವರು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವುದು.

B.S. 27/9/22
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ವಿ)/(ಸಿವಿಲ್), ಕವಿಪ್ರನಿನಿ.
11. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
12. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.